ತಾರೀಖು 20ನೇ ಫಿಬ್ರವರಿ ಸ॥ 1890.

ಸ॥ 1878ನೇ ಇಸವಿ ಫಾರೆಸ್ಟ್‌ರೂಲ್ಸಿನ 9ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಯಿರುವ ನಂದೀ ಸ್ಟೇಟ್ ಫಾರೆಸ್ಟಿನ ಗಡಿ ನಿಷ್ಕರ್ಷೆ ಇದರಿಂದ ಸಕಲ ಜನಗಳ ತಿಳುವಳಿಕೆ ಬಗ್ಗೆ ಪಾಯಿಷ್ ಮಾಡಲ್ಪಟ್ಟಿರುತ್ತೆ.

ನಂದೀ ಸ್ಟೇಟ್ ಫಾರೆಸ್ಟ್.

ಉತ್ತರಕ್ಕೆ—ಚಿಕ್ಕಬಳ್ಳಾಪುರ ತಾಲ್ಲೂಕು ನಾರಾಯಣಪುರ ಜೋಡೀ ಕಣುವೆ ಸರಹದ್ದು.

ಪೂರ್ವಕ್ಕೆ—ನಂದೀ ಗ್ರಾಮದ ಸರ್ವೆ ನಂಬರುಗಳು 77, 78, 79, 103, ಮತ್ತು 106, ಅಂಗಟ್ಟು ಗ್ರಾಮದ ಸರ್ವೆ ನಂಬರ್ 42, ಕುರುವಾವತ್ತಿ ಗ್ರಾಮದ ಸರ್ವೆ ನಂಬರುಗಳು 19, 126, 152, 154, 155, ಮತ್ತು 157, ಸುಲ್ತಾನಪ್ಯಾಟೆ ಗ್ರಾಮದ ಸರ್ವೆ ನಂಬರುಗಳು 50 ಮತ್ತು 80 ಯಾನೆ ಸರಹದ್ದುಗಳು.

ದಕ್ಷಿಣಕ್ಕೆ—ದೊಡ್ಡ ಬಳ್ಳಾಪುರ ತಾಲ್ಲೂಕು ಮುಜರೆ ಕಣುವೆಪುರ ಹೆಗ್ಗಡಹಳ್ಳಿ ಸರಹದ್ದು. ಮತ್ತು ಹೊಸದಾಗಿ ಆಗಿ ಯಿರುವ ಕೋಲಾರ ಸೋಮಪುರ ರಸ್ತೆ.

ಪಶ್ಚಿಮಕ್ಕೆ—ದೊಡ್ಡಬಳ್ಳಾಪುರ ತಾಲ್ಲೂಕು ಚನ್ನಾಪುರ ಗ್ರಾಮದ ಮಡಿಕಾ ಹೊಸಹಳ್ಳಿ ಸರ್ವೆ ನಂಬರುಗಳು 79, 81, 82, 83, 87, 88, 89—90, ಮತ್ತು 91 ಯಾನೆ ಸರಹದ್ದುಗಳು. ದೊಡ್ಡಬಳ್ಳಾಪುರ ತಾಲ್ಲೂಕು ವೆಂಕಟಾಪುರ ಗ್ರಾಮದ ಮುಜರೇ ಚಿಕ್ಕರಾಯಪ್ಪನಹಳ್ಳಿ ಸರ್ವೆ ನಂಬರುಗಳು 17, 23, 24 ಮತ್ತು 100 ಯಾನೆ ಸರಹದ್ದುಗಳು.

ತಿಳಿಯತಕ್ಕ ಅಂಶ—ಡಿಮಾರ್ಕೇಷನ್ ಲೈನು 13 ಮೈಲಿಯೂ ಬಂದು ಫರ್‌ಲಾಂಗ್ ಆಗುತ್ತೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸೆಬ್ ಜಡ್ಜಿಯವರ ಕೋರ್ಟಿನಲ್ಲಿ.

1890ನೇ ಇಸವಿ ಮಿ॥ ಅರ್ಜೀ ನಂಬರ್ 15.

ಕೊರಟಿಗೆರೇ ಸಬ್ ತಾಲ್ಲೂಕು ಹೊಳವನಹಳ್ಳಿ ಹೋಬಳಿ ಲಿಂಗದವೀರಹಳ್ಳಿಯಲ್ಲಿದ್ದು ಮೃತಪಟ್ಟ ಬಾಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಯಲ್ಲಪ್ಪ, ಮೃತಪಟ್ಟ ಸದರೀ ಬಾಬಯ್ಯನವರಿಗೆ ಮಗನಾಗಬೇಕೆಂಬ ಹಕ್ಕುದಾರಿಮೇಲೆ ಸದರೀ ಸ್ಥಳದ ಯಲ್ಲಪ್ಪನವರು ಸದರೀ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಾಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಯಲ್ಲಪ್ಪನವರ ಅರ್ಜೀಯನ್ನು 1890ನೇ ಇಸವಿ ಮಾರ್ಚಿ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಬಾಬಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಫಿಬ್ರವರಿ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟಿಧೆ.

1890ನೇ ಇಸವಿ ಮಿ॥ ಅರ್ಜೀ ನಂಬರ್ 82.

ಬೆಂಗಳೂರು ಕಬ್ಬನ್‌ಪಾಬರಪ್ಯಾಟೇ ಗುಮಟದಲ್ಲಿ ಇದ್ದು ಮೃತಪಟ್ಟ ಪೋಬಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು, ಬೆಂಗಳೂರು ಕಬ್ಬನ್‌ಪಾಬರಪ್ಯಾಟೇಲಿರುವ ಗುರಮ್ಮನು, ಮೃತಪಟ್ಟ ಸದರೀ ಪೋಬಂಣನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕಬ್ಬನ್‌ಪಾಬರಪ್ಯಾಟೇ ಸ್ಥಳದ ಗುರಮ್ಮನು ಗುಮ್ಮಟ ವಾಸಸ್ಥರಾಗಿ ಮೃತಪಟ್ಟ ಪೋಬಂಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್‌ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಗುರಮ್ಮನ ಅರ್ಜಿಯನ್ನು 1890ನೇ ಇಸವಿ ಮಾರ್ಚಿ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪೋಬಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಫಿಬ್ರವರಿ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿಧೆ.